ದಿನಾಂಕ 06.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ- ಶ್ರೀ ಐ.ಆರ್.ಪಿ ವಕೀಲರಿಂದಃ-</u>

ನಾನು ಕಡಂಗವನ್ನು ಒತ್ತುವರಿ ಮಾಡಿದ್ದೇನೆ ಎಂದು ಆರೋಪಿಸಿ ತಹಶೀಲ್ದಾರ್ ರವರು ನನ್ನ ವಿರುದ್ದ ಕ್ರಮ ತೆಗೆದುಕೊಂಡಿದ್ದರು ಎಂದರೆ ಸರಿಯಲ್ಲ. ಸರ್ವೆ ನಂ. 61/1 5ನೇ ಪ್ರತಿವಾದಿಯ ಸ್ವತ್ತಾಗಿದ್ದು, ಸರ್ವೆ ನಂ. 73/3 ನನಗೆ ಸೇರಿದ ಸ್ವತ್ತು. ಸರ್ವೆ ನಂ. 73/3 ರ ಜಮೀನಿಗೆ ಹೊಂದಿಕೊಂಡಂತೆ ಕಡಂಗ ಇದೆ. ನಾನು ಕಡಂಗಕ್ಕೆ ಸೇರಿದ 4 ಸೆಂಟ್ಸ್ ಜಾಗವನ್ನು ಒತ್ತುವರಿ ಮಾಡಿಕೊಂಡಿದ್ದೇನೆ. ನಿಶಾನೆ ಪಿ-6 ಮತ್ತು ನಿಶಾನೆ ಪಿ-10 ನಾನು ಹಾಜರು ಪಡಿಸಿರುವಂತಹ ದಾಖಲೆಗಳು. ನಾನು ನಿಶಾನೆ ಪಿ-10 ದಾಖಲೆಯ ಪ್ರಕಾರ ಕಡಂಗಕ್ಕೆ ಸೇರಿದ 5 ಸೆಂಟ್ಸ್ ಜಾಗವನ್ನು ಒತ್ತುವರಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ದಾವಾ ಬಿ ಷೆಡ್ಯೂಲ್ ಆಸ್ತಿಯ ಮೇಲೆ ನನಗೆ ಹಕ್ಕು ಇದೆ. ಕಡಂಗ ಸರ್ವೆ ನಂ. 73/3 ರ ಜಮೀನಿನಲ್ಲಿ ಇದೆ. ಸರ್ವೆ ನಂ. 73/3 ರ ಪಹಣಿ ನನ್ನ ಹೆಸರಿನಲ್ಲಿ ಇದೆ. ಕಡಂಗವನ್ನು ಉಪಯೋಗಿಸಲು 5ನೇ ಪ್ರತಿವಾದಿಗೂ ಸಹಾ ಹಕ್ಕು ಇದೆ ಎಂಬ ಪ್ರಶ್ನೆಗೆ

ಸಾಕ್ಷಿಯು ಅವರು ಒತ್ತುವರಿ ಮಾಡಿಕೊಂಡಿರುವ ಜಾಗದ ಮೇಲೆ ಅವರಿಗೂ ಹಕ್ಕು ಇದೆ ಎಂದು ಉತ್ತರಿಸಿರುತ್ತಾರೆ. 5 ನೇ ಪ್ರತಿವಾದಿಯು ಒತ್ತುವರಿ ಮಾಡಿಕೊಂಡಿರುವ ಕಡಂಗದ ಜಾಗವನ್ನು ಬಿಟ್ಟುಕೊಟ್ಟರೆ ನಾನು ಒತ್ತುವರಿ ಮಾಡಿಕೊಂಡಿರುವ ಕಡಂಗದ ಜಾಗವನ್ನು ಬಿಡಲು ಸಮ್ಮತಿ ಇದೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಸಮ್ಮತಿ ಇರುವುದಿಲ್ಲ ಎಂದು ಉತ್ತರಿಸಿರುತ್ತಾರೆ.

ಕಡಂಗವು ಬೆಸಗೂರು ಕಾಲೋನಿಯ ಮುಖ್ಯ ರಸ್ತೆಯಿಂದ ಬೆಸಗೂರು ಕಾಲೋನಿಯ ಬಳಿ ಕವಲು ಒಡೆದು, ಸರ್ವೆ ನಂ. 61/1 ಮತ್ತು ಸರ್ವೆ ನಂ. 62/3 ರ ಜಮೀನುಗಳ ಮೂಲಕ ಹಾದುಹೋಗಿ, ಸರ್ವೆ ನಂ. 73/3 ರ ದಕ್ಷಿಣ ದಿಕ್ಕಿನ ಮೂಲಕ ಹಾದುಹೋಗುತ್ತದೆ ಎಂದರೆ ಸರಿಯಲ್ಲ. ನಾನು ಸದರಿ ಕಾಲೋನಿಯ ರಸ್ತೆಯನ್ನು ಮುಚ್ಚಿದ್ದರಿಂದ 5 ನೇ ಪ್ರತಿವಾದಿಗೆ ತನ್ನ ಸ್ವತ್ತಿಗೆ ಹೋಗಲು ತೊಂದರೆಯಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಅಕ್ರಮವಾಗಿ ಸ್ವಾಧೀನದಲ್ಲಿ ಇರುವ ಕಡಂಗದ ಜಾಗವನ್ನು ರಕ್ಷಿಸಿಕೊಳ್ಳುವ ಸಲುವಾಗಿ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.